

ವಿಚಾರಾಣಾಧಿಕಾರಿಯ ಮಾತುಗಳನ್ನು ಅರೆ ಮಾನವರ ಗುಂಪಿನ ಎಲ್ಲರೂ ಖಂಡಿಸತೊಡಗುತ್ತಾರೆ. ಎಲ್ಲರಿಗೂ ಮಾತನಾಡಲು ಅವಕಾಶ ಕೊಡುತ್ತೇವೆ, ಒಟ್ಟಿಗೆ ಕೂಗಾಡಿದರೆ ಹೇಗೆ ಎಂದು ವಿಚಾರಾಣಾಧಿಕಾರಿ ಸಮಜಾಯಿಷಿ ನೀಡಿದರೂ ಸಂಘರ್ಷ ಮುಂದುವರೆಯುತ್ತಲೇ ಇರುತ್ತದೆ. ತಮ್ಮ ಬೇಡಿಕೆ ಏನು? ನಿಮ್ಮ ಸಹಚರರನ್ನು ಬಿಡುಗಡೆ ಮಾಡಬೇಕು ಎನ್ನುವುದೇ ಅಥವಾ ನಿಮ್ಮ ಏಳ್ಗೆಯನ್ನು ಮಾಡಬೇಕು ಎನ್ನುವುದೇ ಎಂದು ಪ್ರಶ್ನಿಸುತ್ತಾರೆ. ಈ ಮಾತು ಅರೆಮಾನವರಿಗೆ ತಿರಸ್ಕಾರದಂತೆ ಕಾಣುತ್ತದೆ. ತಮಗೆ ಅನ್ಯಾಯವಾಗುತ್ತಿದೆ ಎಂದು ಗುಂಪಿನ ಎಲ್ಲರೂ ಆಕ್ರೋಶ ವ್ಯಕ್ತಪಡಿಸುತ್ತಾರೆ. ಈ ಮಧ್ಯೆ ತಪಾಸಣೆಗಾಗಿ ಹೋದ ರೇವಾನಿಗೆ ಪರೀಕ್ಷಕರು ಪೂರ್ವಾಭಾವಿ ಕ್ರಮಗಳನ್ನು ತೆಗೆದುಕೊಂಡು ಕುರ್ಚಿಯಲ್ಲಿ ಕೂರಿಸುತ್ತಾರೆ. ಬಳಿಕ ವಿವಿಧ ದ್ರಾವಣ ಹಾಗೂ ಗುಳಿಗೆಗಳನ್ನು ಸೇವಿಸುವಂತೆ ಹೇಳುತ್ತಾರೆ. ದೇಹದಲ್ಲಾಗುವ ಬದಲಾವಣೆಗಳೆಲ್ಲ ಮಾನಿಟರ್‌ನಲ್ಲಿ ದಾಖಲಾಗಲಾರಂಭಿಸಿತು. ಅಂತಿಮ ಫಲಿತಾಂಶವನ್ನು ಪಡೆದ ಬಳಿಕ ಸಭೆ ಮತ್ತೆ ಆರಂಭವಾಗುತ್ತದೆ. 'ರೇವಾ ಅವರೇ... ರೊಬೋಟಿಕ್ ತಂತ್ರಜ್ಞಾನ ಬೇಡವೆನ್ನುವವರು ಎಷ್ಟೊಂದೆಡೆ ಅವುಗಳ ಸಹಾಯದಿಂದ ಕಾರ್ಯ ನಿರ್ವಹಿಸುತ್ತಿರುವುದು ಎಂತಹ ಕಾಕತಾಳೀಯ ನೋಡಿ. ನಿಮ್ಮ ಕೈ ಕಾಲುಗಳಾಗಿ ಕಾರ್ಯ ನಿರ್ವಹಿಸುತ್ತಿರುವುದು ರೊಬೋಗಳಲ್ಲವೇ? ನಿಮ್ಮ ಮೆದುಳಿಗೆ ಪೆಟ್ಟಾದಾಗ ತಲೆಯೊಳಗೆ ಸಣ್ಣ ರಂಧ್ರವನ್ನು ಕೊರೆದು ಕನಿಷ್ಠ ಛೇದನದ ಮೂಲಕ ಚಿಕಿತ್ಸೆ ಮಾಡಿದ್ದು ರೊಬೋಗಳಲ್ಲವೇ?' ಎಂದು ಪ್ರಶ್ನಿಸುತ್ತಾನೆ.

ಇತ್ತ ಕಡೆ ಹನ್ಸಾ ವಾಣಿಜ್ಯ ರಸ್ತೆಯಲ್ಲಿ ಸಾಗುತ್ತಿದ್ದಾಗ 18 ವರ್ಷದ ಹುಡುಗ ಗಂಟೆಗೆ 100 ಕಿಮೀ ವೇಗದಲ್ಲಿ ಬೈಕ್ ಓಡಿಸುತ್ತಾನೆ, ಇದನ್ನು ವಾಕಿಯಲ್ಲಿ ಟ್ರಾಫಿಕ್ ವಾರ್ಡನ್ ಅನಘಾಳಿಗೆ ಹನ್ಸಾ ಹೇಳಿ ದಂಡ ವಿಧಿಸುವಂತೆ ತಿಳಿಸುತ್ತಾಳೆ. ಅಲ್ಲದ ವಾಣಿಜ್ಯ ತಾಣದಲ್ಲಿ ಹನ್ಸಾ, ಅತಿ ವೇಗದ ಚಾಲಕರ ಮೇಲೆ ಉಲ್ಲಂಘನೆ ಪ್ರಕರಣಗಳನ್ನು ಒಂದು ಗಂಟೆಗೂ ಅಧಿಕ ಅವಧಿ ದಾಖಲಿಸಿ, ಅವರ ಖಾತೆಯಿಂದ ನೇರವಾಗಿ ಸಂಚಾರ ದಂಡದ ಅಕೌಂಟ್‌ಗೆ ದಂಡದ ಮೊತ್ತ ವರ್ಗಾಯಿಸಿದ ಬಳಿಕ ಜಾಗ ಬದಲಾಯಿಸುತ್ತಾಳೆ.

ಜಾಗವನ್ನು ತಲುಪಿ ನಗರದ ಒಂದು ದಿಕ್ಕಿನಿಂದ ಇನ್ನೊಂದು ದಿಕ್ಕಿಗೆ ಏರ್‌ವ್ಯಾನ್‌ನಲ್ಲಿ ಸಾಗುವಾಗ ಕೆಳಗಿನ ರಮಣೀಯ ನೋಟ ಕಣ್ತಣಿಸುತ್ತಿತ್ತು. ಆದರೆ ಅದು ಕೆಲಹೊತ್ತಷ್ಟೇ. ನಿರಂತರ ಚಲನೆಗೆ ನೆಲದ ಮಾರ್ಗವೇ ಅತ್ಯುತ್ತಮವೆನಿಸಿತ್ತು.

ಅಂದು ಅವಳಿಗೆ 'ವಾಯು ಮಾರ್ಗ'ದ ಸಂಚಾರ ನಿಯಂತ್ರಣದ ಕೆಲಸ ಹಚ್ಚಲು ಕಾರಣವಿತ್ತು. ರಸ್ತೆ ಮಾರ್ಗದಲ್ಲಿ 'ಅರೆ ಮಾನವರ ಪಡೆ'ಯ ಪ್ರತಿಭಟನಾ ಮೆರವಣಿಗೆ ಸುಮಾರು 5 ಕಿ.ಮೀ.ವರೆಗೆ ನಗರದ ಕೇಂದ್ರ ಪ್ರದೇಶದಲ್ಲಿ ಸಾಗುತ್ತಿರುವುದರಿಂದ, ವಾಹನಗಳ ಸಂಚಾರ ಅಸ್ತವ್ಯಸ್ತವಾಗಿ ಜನರು ಇಂಥಹ ಪರಿಸ್ಥಿತಿಯಲ್ಲಿ ಏರ್ ಬಸ್‌ಗಳ ಮೊರೆಹೋಗುತ್ತಿದ್ದರು. ಏರ್ ಬಸ್ ನಿಲ್ದಾಣದಲ್ಲಿ ಈ ಸಂದರ್ಭದಲ್ಲಿ ವಿಪರೀತ ನೂಕುನುಗ್ಗಲು ಸಂಭವಿಸಬಹುದಾದ್ದರಿಂದ ತನ್ನ ಸಹಾಯಕ್ಕೆ ಒಂದು ರೊಬೋ ಪಡೆಯನ್ನೇ ಕೇಳಿದ್ದಳು. ಅವಳ ಕೋರಿಕೆಗೆ ಸಂಚಾರ ಕಮೀಷನರ್ 'ಅಸ್ತು' ಎಂದು ಅವಳಿದ್ದಲ್ಲಿಗೆ ಅವುಗಳನ್ನು ಕಳುಹಿಸಿಕೊಟ್ಟಿದ್ದರು.

ಸಾಧಾರಣವಾಗಿ ಹೆಚ್ಚು ನೂಕುನುಗ್ಗಲು ಸಂಭವಿಸುವೆಡೆ ಮುಂಜಾಗ್ರತಾ ಕ್ರಮವಾಗಿ ಸಾರ್ವಜನಿಕರಿಗೆ ಆಪ್‌ನಲ್ಲಿ ಏರ್‌ಬಸ್‌ನ ಸಮಯ ನಿಗದಿಪಡಿಸಿ ಕಳುಹಿಸಲಾಗುತ್ತಿತ್ತು. ಕೇವಲ ನಿಲ್ದಾಣ ಮಾತ್ರವಲ್ಲದೆ ಅವರುಗಳು ಮನೆ ಬಿಡುವಾಗಿನ ಸಮಯ, ರಸ್ತೆಯ ಮೇಲೆ ಸಾಗಿ ಏರ್‌ಬಸ್ ಹತ್ತಿ ಇಳಿದು ನಂತರ ತಮ್ಮ ನಿಗದಿತ ಸ್ಥಾನ ತಲುಪುವವರೆಗೆ ಅವರ ಚಲನೆ ನಿಯಂತ್ರಣಗೊಂಡು ನೂಕುನುಗ್ಗಲನ್ನು ತಪ್ಪಿಸಲು ವ್ಯವಸ್ಥೆಯಾಗುತ್ತಿತ್ತು. ಆದಾಗ್ಯೂ ಕೆಲವೊಮ್ಮೆ ಪರಿಸ್ಥಿತಿ ಕೈ ಮೀರಿದಾಗ ಹೆಚ್ಚುವರಿ ರೊಬೋ ಫೋರ್ಸ್ ಬಳಸಬೇಕಾಗುತ್ತಿತ್ತು.

ಹನ್ಸಾ ನಿಲ್ದಾಣದ ವೀಡಿಯೋ ವಾಲ್‌ನಲ್ಲಿ ನಮೂದಾದ ಏರ್ ಬಸ್‌ಗಳ ಸಮಯವನ್ನು ವೀಕ್ಷಿಸುವಾಗಲೇ ಕೆಳಗೆ ರಸ್ತೆಯ ಮೇಲೆ ಕೂಗಾಟ ದೂರದಿಂದಲೇ ಕೇಳಿಬರುತ್ತಿತ್ತು. ಕೆಳಗೆ ಇಣುಕಿ ನೋಡಿದಾಗ ಅರೆ ಮಾನವರ ಪಡೆಯೊಂದು ಬೃಹತ್ ಮಾನವ ಸರಪಣಿಯನ್ನು ನಿರ್ಮಿಸಿ ಘೋಷಣೆ ಕೂಗುತ್ತಾ ತಮ್ಮ ಮೆರವಣಿಗೆ ಶುರು ಮಾಡಿರುವುದು ಕಾಣಿಸಿತ್ತು.

ವಾಹನ ಸಂಚಾರ ತಡೆಯುವುದನ್ನು ನಿರ್ಬಂಧಿಸಲಾಗಿದ್ದರೂ, ಈ ಉದ್ದನೆಯ ಸರಪಣಿ ಸಾಗುವಾಗ ಸಹಜವಾಗಿ ಸಂಚಾರ ಸಿಗ್ನಲ್‌ಗಳು ನೀಡಿದ ಸೂಚನೆ ಪಾಲಿಸಲಾಗದೆ ವಾಹನ ಸಂಚಾರ ತಡೆಯಲ್ಪಡುತ್ತಿತ್ತು. ಎಂ.ಪಿ. ವಾಕಿಗೆ ಮೆರವಣಿಗೆ ಶುರುವಾಗಿರುವ ಮಾಹಿತಿ ಅಲ್ಲಿದ್ದ ಲೊಕೇಷನ್‌ನಿಂದ ರವಾನೆಯಾದಾಗ ಹನ್ಸಾ ಏರ್ ಬಸ್ ನಿಲ್ದಾಣದ ಪ್ರಯಾಣಿಕರೆಡೆ ಗಮನ ಹರಿಸಿದಳು. ರೊಬೋ ಕಾಪ್‌ಗಳಿಗೆ ಸ್ಥಗಿತವಾಗಿ ಒಂದೆಡೆ ನಿಲ್ಲದೆ ಅತ್ತಿಂದಿತ್ತ ನಿಯಮಿತವಾಗಿ ಓಡಾಡಿಕೊಂಡಿರಲು ಸೂಚನೆ ನೀಡಿ ತಾನೂ ಜನ ಹತ್ತುವೆಡೆ ನಿಂತು ನೋಡತೊಡಗಿದಳು. ಅವಳ ಸಂಚಾರ ಜಾಕೆಟ್ ನೋಡಿಯೇ ಇಬ್ಬರು ವೃದ್ಧ ದಂಪತಿಗಳು ಅವಳೆಡೆ ನಿಧಾನವಾಗಿ ನಡೆದು ಬಂದಿದ್ದರು.

'ವಾರ್ಡನ್, ನಮ್ಮ ಏರ್‌ಬಸ್ ವ್ಯಾಲೆಟ್‌ನಲ್ಲಿ ಕರೆನ್ಸಿ ಮುಗಿದುಹೋಗಿದೆ. ನಮಗೆ ತುರ್ತಾಗಿ ಮಗನ ಮನೆ ಇರೋ 'ಕ್ರಾಸ್‌ಬಾರ್' ಕಡೆ ತೆರಳಬೇಕಿದೆ. ಸಹಾಯ ಮಾಡಿ.'

'ಮ್ಯಾಮ್, ಏರ್‌ಬಸ್ ಸ್ವೈಪಿಂಗ್ ಸಿಸ್ಟಂನಲ್ಲಿ ನಿಮ್ಮ ವ್ಯಾಲೆಟ್‌ನಲ್ಲಿನ ಕರೆನ್ಸಿ ಖಾಲಿಯಿದ್ದರೆ ಒಳಗೆ ಪ್ರವೇಶವಿರುವುದಿಲ್ಲ. ನೀವು ಏರ್‌ಟ್ಯಾಕ್ಸಿ ಹತ್ತಿ ಮಗನ ಮನೆ ಬಳಿ ಇಳಿಯುವಾಗ ಪೋಸ್ಟ್ ಪೇಡ್ ಕರೆನ್ಸಿ ಜಮಾ ಮಾಡಬಹುದಲ್ಲವೇ...'

'ಸೀನಿಯರ್ ಸಿಟಿಜನ್ಸ್ ಆದ ನಮಗೆ ಉಚಿತ ಪ್ರಯಾಣವನ್ನು ಘೋಷಣೆ ಮಾಡಲಾಗಿತ್ತಾದರೂ ನಮಗೆ ಅದರ ಕಾರ್ಡ್ ತಲುಪಿಲ್ಲ. ಅದನ್ನಾದರೂ ಕೊಡಿಸಿ.' ಆ ವೃದ್ಧ ಮಹಿಳೆ ಉಚಿತ ಪ್ರವೇಶಕ್ಕೆ ಪಟ್ಟುಹಿಡಿದಂತೆ ಕಾಣುತ್ತಿತ್ತು.

ಹಲವಾರು ಬಾರಿ ಅವಳ ಕೆಲಸ ಸಂಚಾರ ಸುಗಮಗೊಳಿಸುವೆಡೆ ಮಾತ್ರವಲ್ಲದೆ ಇತರರ ಸೇವೆಯ ಕಡೆ ಗಮನ ಹರಿಸಬೇಕಾದ ಸಂದರ್ಭಗಳು ಬರುವುದೇ ಹೆಚ್ಚಿತ್ತು.

'ಮ್ಯಾಮ್, ನೀವು ಹೀಗೆಯೇ ಮುಂದೆ ಹೋಗಿ ಎಡಕ್ಕೆ ತಿರುಗಿದರೆ, ಅಲ್ಲಿರುವ